# ಹಳೇ ಪಿ.ಸಿ.ಗಳಲ್ಲಿ ಕ್ರೋಮ್ ಬಂದ್!

**ಹಂತಹಂತವಾಗಿ ಕ್ರೋಮ್ ಅನ್ನು ಅಪ್‌ಡೇಟ್ ಮಾಡುತ್ತಿರುವ ಗೂಗಲ್, ಜನವರಿ 15ರ ನಂತರ ಹಳೆಯ ಪಿ.ಸಿ.ಗಳಲ್ಲಿ ತನ್ನ ಕಾರ್ಯನಿರ್ವಹಣೆಯನ್ನು ಸ್ಥಗಿತಗೊಳಿಸಲಿದೆ.**

**■ ಶಶಿಕುಮಾರ್ ಸಿ.**

ಬಹುನಿರೀಕ್ಷಿತ ‘ಕ್ರೋಮ್ 110’ ಆವೃತ್ತಿಯನ್ನು ಬಿಡುಗಡೆ ಮಾಡಲು ಗೂಗಲ್ ಸಜ್ಜಾಗುತ್ತಿದ್ದು, ಫೆಬ್ರುವರಿ 7ಕ್ಕೆ ಮುಹೂರ್ತವನ್ನೂ ಫಿಕ್ಸ್ ಮಾಡಿದೆ. ಅದಕ್ಕೂ ಮುನ್ನ ಮಹತ್ವದ ನಿರ್ಧಾರವೊಂದಕ್ಕೆ ಮುನ್ನುಡಿ ಬರೆದಿರುವ ಕಂಪನಿಯು, ವಿಂಡೋಸ್‌ನ ಹಳೆಯ ಆವೃತ್ತಿಯ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪಿ.ಸಿ.ಗಳಲ್ಲಿ ಕ್ರೋಮ್ ಸೇವೆಯನ್ನು ಸ್ಥಗಿತಗೊಳಿಸಲಿದೆ.

ಜನವರಿ 15ರ ನಂತರ ವಿಂಡೋಸ್‌ನ ಹಳೆಯ ಆವೃತ್ತಿಗಳು ಬಳಕೆಯಲ್ಲಿರುವ ಪಿ.ಸಿ.ಗಳಲ್ಲಿ ಕ್ರೋಮ್ ಸ್ಥಗಿತಗೊಳ್ಳಲಿದ್ದು, ಬಳಕೆದಾರರು ಕ್ರೋಮ್ ಬದಲಿಗೆ ಬೇರೊಂದು ಬ್ರೌಸರ್‌ನ ಮೊರೆಹೋಗುವುದು ಅನಿವಾರ್ಯವಾಗಲಿದೆ.

### ಯಾವ ಆವೃತ್ತಿಗಳಲ್ಲಿ ಸೇವೆ ಸ್ಥಗಿತ

ವಿಂಡೋಸ್ 7 ಮತ್ತು ವಿಂಡೋಸ್ 8.1 ಚಾಲ್ತಿಯಲ್ಲಿರುವ ಪಿ.ಸಿ.ಗಳಲ್ಲಿ ಕ್ರೋಮ್ ತನ್ನ ಸೇವೆಯನ್ನು ಸ್ಥಗಿತಗೊಳಿಸಲಿದೆ. ‘ಕ್ರೋಮ್ 109’ ಆವೃತ್ತಿಯು ವಿಂಡೋಸ್ 7, ವಿಂಡೋಸ್ 8/8.1ನಲ್ಲಿ ಕಾರ್ಯನಿರ್ವಹಿಸುವ ಕೊನೆಯ ಆವೃತ್ತಿಯಾಗಲಿದೆ. ಹೀಗಾಗಿ, ಕ್ರೋಮ್‌ನ ಬದಲಿಗೆ ಮತ್ತೊಂದು ಬ್ರೌಸರ್‌ನ ಕಡೆಗೆ ದೃಷ್ಟಿಹಾಯಿಸಬೇಕಿದೆ. ವಿಂಡೋಸ್‌ನ ಈ ಆವೃತ್ತಿಗಳಲ್ಲಿ ಸುರಕ್ಷತೆಗೆ ಸಂಬಂಧಿಸಿದ ತನ್ನ ನೆರವನ್ನೂ ಮೈಕ್ರೊಸಾಫ್ಟ್ ಸಹ ಹಿಂಪಡೆಯಲಿದೆ.

ವಿಂಡೋಸ್‌ನ ಈ ಆಪರೇಟಿಂಗ್ ಸಿಸ್ಟಂಗಳಲ್ಲಿ ಕ್ರೋಮ್ ಚಾಲ್ತಿಯಲ್ಲಿದ್ದರೂ ಗೂಗಲ್‌ನಿಂದ ಯಾವ ನವೀಕರಣಗಳೂ ಲಭ್ಯವಾಗುವುದಿಲ್ಲ. ಅಲ್ಲದೆ ಇದು ವೈರಸ್ ದಾಳಿಗೆ ಮತ್ತು ಇತರ ಭದ್ರತಾ ಅಪಾಯಗಳಿಗೆ ಆಹ್ವಾನ ನೀಡಿದಂತಾಗುತ್ತದೆ. ಹೀಗಾಗಿ, ವಿಂಡೋಸ್ 10 ಮತ್ತು ಅದರ ನಂತರದ ಆಪರೇಟಿಂಗ್ ಸಿಸ್ಟಂಗಳಿಂದ ಚಾಲ್ತಿಯಲ್ಲಿರುವ ಪಿ.ಸಿ.ಗಳಲ್ಲಿ ಕ್ರೋಮ್ ಕಾರ್ಯನಿರ್ವಹಿಸುತ್ತದೆ. ಕ್ರೋಮ್ ಬಳಸಲೂ ಈ ಆವೃತ್ತಿಗಳಿಗೆ ಅಪ್‌ಡೇಟ್ ಆಗುವುದು ಕಡ್ಡಾಯವಾಗಿದೆ.

### ಫೆಬ್ರುವರಿಗೆ ಬರಲಿದೆ ಕ್ರೋಮ್ 110

‘ಕ್ರೋಮ್ 110’ ಗೂಗಲ್‌ನ ಬಹುನಿರೀಕ್ಷಿತಗಳಲ್ಲೊಂದು. ಬಳಕೆದಾರರಿಗೆ ಇನ್ನಷ್ಟು ಆಕರ್ಷಕ ಫೀಚರ್‌ಗಳನ್ನು ಕಲ್ಪಿಸುವ ಸಲುವಾಗಿ ತನ್ನ ಬ್ರೌಸರನ್ನು ಸಾಕಷ್ಟು ಪರಾಮರ್ಶೆಗೆ ಒಳಪಡಿಸಿರುವ ಗೂಗಲ್, ಅದಕ್ಕೆ ಅಂತಿಮ ರೂಪ ನೀಡಿದೆ. ಅಲ್ಲದೆ ಇದೇ ಫೆಬ್ರುವರಿಯಲ್ಲಿ ಬಿಡುಗಡೆಗೊಳ್ಳಲಿದೆ. 2021ರ ಜುಲೈನಲ್ಲೇ ‘ಕ್ರೋಮ್ 110’ ಬಿಡುಗಡೆ ಮಾಡಲು ಯೋಜಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಮುಂದೂಡಲಾಗಿತ್ತು.

ವಿಂಡೋಸ್‌ನ ಹಳೆಯ ಆಪರೇಟಿಂಗ್ ಸಿಸ್ಟಂ ಬಳಸುತ್ತಿರುವವರು ವಿಂಡೋಸ್‌ನ ಪ್ರಚಲಿತ ವರ್ಷನ್‌ಗೆ ಅಪ್‌ಡೇಟ್ ಆಗಬೇಕು. ಜೊತೆಗೆ ಕ್ರೋಮ್‌ನ ಇತ್ತೀಚಿಗಿನ ಆವೃತ್ತಿ ಅಥವಾ ಮುಂದಿನ ತಿಂಗಳು ಬಿಡುಗಡೆಯಾಗಲಿರುವ ಕ್ರೋಮ್ 110 ಅನ್ನು ಬಳಸಬೇಕು ಎಂದು ಈಗಾಗಲೇ ಗೂಗಲ್ ಸೂಚಿಸಿದೆ. ■

# ವಾಟ್ಸಾಪ್ ಸ್ಥಗಿತ

ವಾಟ್ಸಾಪ್ 49ಕ್ಕೂ ಅಧಿಕ ಸ್ಮಾರ್ಟ್‌ಫೋನ್‌ಗಳಲ್ಲಿ ಕಾರ್ಯನಿರ್ವಹಿಸುವುದಿಲ್ಲ!

ವಾಟ್ಸಾಪ್ ಜಗತ್ತಿನಾದ್ಯಂತ ಕೋಟ್ಯಂತರ ಮಂದಿ ಸಕ್ರಿಯ ಬಳಕೆದಾರರನ್ನು ಹೊಂದಿದೆ. ಈ ಪೈಕಿ 500 ಮಿಲಿಯನ್ ಬಳಕೆದಾರರು ಭಾರತೀಯರೇ ಎಂಬುದು ವಿಶೇಷ. ಇಂತಹ ವಾಟ್ಸಾಪ್ ಈಗ ಆ್ಯಂಡ್ರಾಯ್ಡ್ 49ಕ್ಕೂ ಅಧಿಕ ಸ್ಮಾರ್ಟ್‌ಫೋನ್‌ಗಳಲ್ಲಿ ಸ್ಥಗಿತಗೊಳ್ಳಲಿದೆ.

ವಾಟ್ಸಾಪ್ ಗುಣಮಟ್ಟದ ಫೀಚರ್‌ಗಳನ್ನು ಕಾಲಕಾಲಕ್ಕೆ ಅಪ್‌ಗ್ರೇಡ್ ಮಾಡುತ್ತಿದ್ದು, ಈಚೆಗೆ ಸರಣಿಯಾಗಿ ಹಲವಾರು ಫೀಚರ್‌ಗಳನ್ನು ಬಿಡುಗಡೆ ಮಾಡಿದೆ. ಈ ಫೀಚರ್‌ಗಳು ಮತ್ತು ಮೊಬೈಲ್‌ನ ಕಾರ್ಯಚಟುವಟಿಕೆಗಳ ನಡುವೆ ತಾಂತ್ರಿಕ ಸಮಸ್ಯೆ ಉಂಟಾಗುತ್ತಿದೆ. ಈ ಕಾರಣಕ್ಕೆ ವಾಟ್ಸಾಪ್‌ನ ಉತ್ಕೃಷ್ಟ ಫೀಚರ್‌ಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸದ ಸ್ಮಾರ್ಟ್‌ಫೋನ್‌ಗಳಲ್ಲಿ ವಾಟ್ಸಾಪ್ ಸ್ಥಗಿತಗೊಳ್ಳಲಿದೆ ಎಂದು ವರದಿಯಾಗಿದೆ.

2011, 2012 ಮತ್ತು 2013ರಲ್ಲಿ ಬಿಡುಗಡೆಗೊಂಡ ಸ್ಯಾಮ್‌ಸಂಗ್‌ನ 7 ಸ್ಮಾರ್ಟ್‌ಫೋನ್‌ಗಳಲ್ಲಿ ಸೇವೆ ಇಲ್ಲ. ಗ್ಯಾಲಕ್ಸಿ ಎಸ್ 2, ಗ್ಯಾಲಕ್ಸಿ ಕೋರ್, ಗ್ಯಾಲಕ್ಸಿ ಎಸ್2, ಗ್ಯಾಲಕ್ಸಿ ಎಸ್3 ಮಿನಿ, ಗ್ಯಾಲಕ್ಸಿ ಟ್ರೆಂಡ್ II, ಗ್ಯಾಲಕ್ಸಿ ಟ್ರೆಂಡ್ ಲೈಟ್ ಮತ್ತು ಗ್ಯಾಲಕ್ಸಿ ಎಕ್ಸ್‌ಕವರ್ 2 ಫೋನ್‌ಗಳಲ್ಲಿ ಹಾಗೂ ಇನ್ನಿತರ ಹಳೆಯ ಸ್ಮಾರ್ಟ್‌ಫೋನ್‌ಗಳಲ್ಲಿ ವಾಟ್ಸಾಪ್ ಸ್ಥಗಿತಗೊಳ್ಳಲಿದೆ.

ತಮ್ಮ ಸ್ಮಾರ್ಟ್‌ಫೋನ್‌ಗಳನ್ನು ಬದಲಿಸುವಂತೆ ಹಾಗೂ ಅಪ್‌ಗ್ರೇಡ್ ಮಾಡಿಕೊಳ್ಳುವಂತೆ ಈಗಾಗಲೇ ತನ್ನ ಬಳಕೆದಾರರಿಗೆ ವಾಟ್ಸಾಪ್ ಹಲವು ಬಾರಿ ಎಚ್ಚರಿಕೆಯ ಸಂದೇಶಗಳನ್ನು ಕಳುಹಿಸಿದೆ. ದುರುದ್ದೇಶಪೂರಿತ ಚಟುವಟಿಕೆಯಿಂದ ಡಿವೈಸ್‌ಗಳನ್ನು ರಕ್ಷಿಸಲು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ವಾಟ್ಸಾಪ್ ಈ ಕ್ರಮ ತೆಗೆದುಕೊಂಡಿದೆ ಎನ್ನಲಾಗಿದೆ. ■